ಅವಳು ನಡೆದುಕೊಂಡ ರೀತಿ, ಆಸ್ಪತ್ರೆಯಿಂದ ಹಿಂತಿರುಗಿದ ಬಳಿಕವೂ ಮಾತನಾಡದೇ ಇರುವುದು... ಬೀಳ್ಕೊಡಲೂ ಹೊರಗೆ ಬಾರದಿರುವುದು... ಎಲ್ಲವನ್ನೂ ತಿಳಿಸಿದಳು.

'ಯಾಕೋ ನಿವೀ ಸ್ವಲ್ಪ ವ್ಯತಿರಿಕ್ತವಾಗಿ ವರ್ತಿಸುತ್ತಿದ್ದಾಳೆ. ನಮ್ಮ ಜೊತೆ ಹೇಗೆ ನಡೆದುಕೊಂಡರೂ ನಮ್ಗೆ ಬೇಜಾರಿಲ್ಲ. ಆದರೆ ಮಗೂಗೆ ನಿನ್ನೆ ಹಾಗಾಗಿದ್ದಕ್ಕೆ ನಾವಾಗಲೀ, ನಮ್ಮ ಮಕ್ಕಳಾಗಲೀ ಹೊಣೆ ಅಲ್ಲ. ನಾವು ಆ ಅಪವಾದವನ್ನು ಹೊತ್ತು ಇಲ್ಲಿಂದ ಹೋಗಲು ಸಿದ್ಧರಿಲ್ಲ. ನಿನ್ನೆ ನಾನು ಮಕ್ಕಳಿಗೆ ಹೊಡೆದು ಬಯ್ದು ಗದರಿಸಿ, ರಮಿಸಿ, ಪ್ರತ್ಯೇಕವಾಗಿ ಕರೆದು ಹೇಗೆ ಕೇಳಿದರೂ ಅವರು ತಾವು ನಿಧಿಯನ್ನು ಟಬ್‌ನಲ್ಲಿ ಅಡಗಿಸಿಲ್ಲವೆಂದೇ ಹೇಳಿದರು. ಹಾಸಿಗೆಯ ಮೇಲೆ ಅದೂ ಮಂಚದ ಮೇಲೆ ಹೊರಳಾಡುತ್ತಿದ್ದ ಮಗು, ಅದರ ಕೆಳಗಿದ್ದ ಟಬ್‌ಗೆ ಹೇಗೆ ಹೋಯಿತು... ಅದನ್ನು ಮುಚ್ಚಿಟ್ಟದ್ದು ಯಾರು ಎನ್ನುವುದೇ ಯಕ್ಷ ಪ್ರಶ್ನೆ...'

ಕೃತ್ತಿಕಾಳ ಮಾತುಗಳನ್ನೆಲ್ಲಾ ಆಲಿಸಿ ಪ್ರದೀಪ ದಂಗಾಗಿದ್ದ. ಇಷ್ಟು ದೊಡ್ಡ ಸತ್ಯ ತನ್ನಿಂದ ಮುಚ್ಚಿಡುವ ಯತ್ನ ನಡೆಸಿದರಲ್ಲಾ... ಎನಿಸಿತು.

'ಭಾವ, ನನ್ಗೆ ಅವರ ಮೇಲೇನೂ ದ್ವೇಷವಿಲ್ಲ. ನಾವೀಗ ಆಧುನಿಕ ಜಗತ್ತಿನಲ್ಲಿದ್ದೇವೆ. ಪರಿಸ್ಥಿತಿಗಳು ಮುಚ್ಚಿಟ್ಟಷ್ಟೂ ವಿಕೋಪಕ್ಕೆ ಹೋಗುವುದೇ ಜಾಸ್ತಿ ಎಂದು ನಾನು ಭಾವಿಸುವೆ. ಉಪಶಮನ ಇಲ್ಲದ್ದು ಯಾವುದೂ ಇಲ್ಲ. ಅವ್ರು ನಾರ್ಮಲ್ ಆಗಿಲ್ಲ ಅಂತ ನನಗನ್ನಿಸುತ್ತೆ, ಇದು ಬರೀ ನನ್ನ ದೃಷ್ಟಿಕೋನವೋ ಅಥವಾ ನಿಮಗೂ ಇದರ ಮೊದಲು ಹೀಗೆ ಅನುಭವ ಆಗಿದೆಯೋ ನನಗೆ ಗೊತ್ತಿಲ್ಲ. ನಾವಿಬ್ಬರೂ ಮೊದಲ ಸಲ ಭೇಟಿ ಆಗುತ್ತಿದ್ದೇವೆ. ಆದರೆ ಇಂಥ ವಿಚಾರ ಕುರಿತು ಮಾತನಾಡಬೇಕಾಗಿ ಬಂದದ್ದು ದುರದೃಷ್ಟ. ಆದರೆ ನಿಮ್ಮ ಒಳಿತಿಗೆ ಹೇಳಿದೆ. ಪರಿಸ್ಥಿತಿ ಕೈ ಮೀರಿ ಹೋಗುವ ಮೊದಲು ಏನಾದರೂ ಮಾಡಿ. ನಿಮ್ಗೆ ನನ್ನ ಮಾತಿನಿಂದ ಮನಸ್ಸಿಗೆ ನೋವಾದರೆ ದಯವಿಟ್ಟು ಕ್ಷಮಿಸಿ. ಬರ್ತೀನಿ...' ಎಂದು ಅವನಿಗೆ ಬೆನ್ನು ಮಾಡಿ ತನಗಾಗಿ ಕಾಯುತ್ತಿದ್ದ ಕಾರಿನತ್ತ ನಡೆದವಳು, ಅದನ್ನು ಏರುವ ಮುನ್ನ ಇವನತ್ತ ನೋಡಿ ಕೈ ಬೀಸಿದಳು. ಪ್ರದೀಪ ಪ್ರತಿಕ್ರಿಯಿಸಲೂ ಆಗದಷ್ಟು ಜಡವಾಗಿ ನಿಂತರೂ, ಅವನ ಮನಸ್ಸಲ್ಲಿ ಕೋಲಾಹಲವೆದ್ದಿತ್ತು. ಅವನು ನೋಡುತ್ತಿದ್ದಂತೇ ಕಾರು ಅವನ ದೃಷ್ಟಿಯಿಂದ ಕಣ್ಮರೆಯಾಗಿತ್ತು. ಅದು ಹೇಗೆ ಕಾಲೆಳೆದುಕೊಂಡು ನಡೆದು ಮನೆಯೊಳಗೆ ಬಂದು ಕುಳಿತನೋ, ಅವನಿಗೇ ತಿಳಿಯಲಿಲ್ಲ. ಕೃತ್ತಿಕಾ ಆಡಿದ ಮಾತುಗಳೇ ಅವನ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿದ್ದವು.

ವೀಣಾ ಸೆರಗಿಗೆ ಕೈಯೊರೆಸಿಕೊಂಡು ಕೃತಕ ನಗೆ ನಗುತ್ತ ಹೊರ ಬಂದರು, 'ಪ್ರದೀಪ... ಊಟ ಮಾಡಿಕೊಂಡೇ ಹೋಗು...' ಉಪಚಾರ ನಡೆಸಿದರು. ಪ್ರದೀಪನ ಗಂಭೀರ ಮುಖ ಕಂಡು, ಕೇಶವರಿಗೆ ಕೃತ್ತಿಕಾ ಅವನಲ್ಲಿ ಎಲ್ಲಾ ಸಂಗತಿ ತಿಳಿಸಿರುವಳೆಂಬುದಕ್ಕೆ ಯಾವ ಸಂಶಯವೂ ಉಳಿದಿರಲಿಲ್ಲ. ಅವನೆದುರು ಅಪರಾಧಿಯಂತೆ ತಲೆ ತಗ್ಗಿಸಿ, ಅವನ ಪ್ರಶ್ನೆಗಳಿಗೆ ಬೆದರಿ ಕಳವಳದಿಂದ ನಿಂತಿದ್ದರು.

'ನಿಧಿಗೆ ಏನಾಗಿತ್ತು? ಅವಳು ಆಸ್ಪತ್ರೆಗೆ ಹೋಗಬೇಕಾಗಿದ್ದು ಯಾಕೆ?' ಬಂದೂಕಿನಿಂದ ಸಿಡಿದಂತೆ ಹೊರಬಂದಿತ್ತು ಅವನ ಬಾಯಿಂದ ಮೊದಲ ಪ್ರಶ್ನೆ. ವೀಣಾ ಮತ್ತು ಕೇಶವರ ಮುಖ ಒಮ್ಮೆಗೇ ಕಪ್ಪಡರಿತು. (ಸಶೇಷ)




## ಎಲ್ಲೂ ಅತಿರೇಕವಿಲ್ಲದ ಕಥಾಹಂದರ

ವಸುಮತಿ ಉಡುಪರ ಧಾರಾವಾಹಿಯ ಕೊನೆಯ ಕಂತು ಸ್ವಲ್ಪ ಸಿನಿಮೀಯ ಹಾಗೂ ಅವಸರದಲ್ಲಿ ಮುಗಿಸಿದಂತೆ ಭಾಸವಾಯಿತು. ತಮ್ಮ ನವಿರಾದ ನಿರೂಪಣೆಗೆ ಹೆಸರಾದ ವಸುಮತಿಯವರ ನೈಜ ಪಾತ್ರಗಳು, ಎಲ್ಲೂ ಅತಿರೇಕವಿಲ್ಲದ ಕಥಾ ಹಂದರ, ಬಹಳ ದಿನದ ನಂತರ ಧಾರಾವಾಹಿ ಓದಿಗೆ ನನ್ನನ್ನು ಮತ್ತೆ ಬರಸೆಳೆಯಿತು.

—ಆರ್. ಟಿ. ಶರಣ್ ಕಲಬುರಗಿ

## ಜೀವಂತ ನದಿಯಂತೆ...

ಈ ಧಾರಾವಾಹಿ ಚೆನ್ನಾಗಿ ಮೂಡಿಬಂತು. ಇದರ ಕಥೆ ನಿರ್ಮಲ ನದಿಯಂತೆ ಸರಾಗವಾಗಿ ಓದಿಸುತ್ತಾ ಮುಗಿಯಿತು. ಇದು ಓದುಗರಿಗೆ ಜೀವಂತ ಪಾಠ ಆಗಿದೆ. ಕಾದಂಬರಿಗಾರ್ತಿ ಎಲ್ಲಾ ಪಾತ್ರಗಳಿಗೂ ಚೆನ್ನಾಗಿ ಮುಕ್ತಿ ಕೊಟ್ಟರು. ಆದರೆ ಕಮಲತ್ತೆಯ ಕಥೆ ಇನ್ನೂ ಕುತೂಹಲ ಮೂಡಿಸುತ್ತಾ ಮುಗಿಸಬಹುದಿತ್ತು. ಕೊರೊನಾ ಕಾಲ ಎಲ್ಲಾ ಜನರಿಗೆ ಸುನಾಮಿಯಂತೆ ಅಪ್ಪಳಿಸಿ ಶಿವರಾಮ ಭಟ್ಟರಿಗೆ ಮುಕ್ತಿ ದೊರಕಿತು.

—ಶಿವಲಿಂಗಯ್ಯ, ತುಮಕೂರು

## ಆರೋಗ್ಯಪೂರ್ಣ ಆಲೋಚನೆ

ಧಾರಾವಾಹಿ ಸರಳ ನಿರೂಪಣೆ, ಆತ್ಮೀಯ ಬರವಣಿಗೆಯಿಂದ ಬಹಳ ಆಕರ್ಷಕವಾಗಿತ್ತು. ಬದಲಾಗುತ್ತಿರುವ ತಲೆಮಾರುಗಳ ಆಲೋಚನೆಗಳಿಂದಾಗಿ ಎದುರಾಗುವ ಕೌಟುಂಬಿಕ ಸಂಘರ್ಷಗಳು ಪರಿಹಾರಗಳನ್ನೇ ಕಾಣದೇ ಎಷ್ಟೋ ಕುಟುಂಬಗಳು ಸಮಸ್ಯೆಗಳ ಸುಳಿಗೆ ಸಿಕ್ಕಿಬದ್ದಾಡುತ್ತಿವೆ. ಹೊಸ ತಲೆಮಾರು, ಹಳೆಯ ಕಾಲದ ಜನ ಇಂದು ಪರಸ್ಪರ ಆಲೋಚನೆ ಗಳನ್ನು ಗೌರವಿಸದೇ ಹೋದರೆ ಮನುಷ್ಯ ಸಂಬಂಧಗಳು ತೆಳುವಾಗಿ ಮಾನವೀಯ ಗುಣಗಳೇ ಕಣ್ಮರೆಯಾಗಲಿವೆ. ಈ ನಿಟ್ಟಿನಲ್ಲಿ ಕಾದಂಬರಿಯ ಅಂತ್ಯದಲ್ಲಿ ಪ್ರಸನ್ನ ತನ್ನ ತಾಯಿಯನ್ನು ಮತ್ತೆ ಅವಳ ಮೂಲ ನೆಲೆಗೆ ಸೇರಿಸಿ ಅವಳಿಗೂ ಮತ್ತು ತನಗೂ ಎದುರಾಗಿರುವ ಬಿಕ್ಕಟ್ಟಿಗೆ ಪರಿಹಾರ ಹುಡುಕಿಕೊಂಡ. ಇದು ಇವತ್ತಿನ ಸೂಕ್ತ ಹಾಗೂ ಆರೋಗ್ಯಪೂರ್ಣ ಆಲೋಚನೆಯೂ ಹೌದು.

—ಸುಜಾತ ಕುಬ್ಚಣ್ಣ, ಬೆಂಗಳೂರು

## ಪ್ರೌಢಿಮೆ ಮೆರೆದಿದೆ

ಇತ್ತೀಚಿನ ಧಾರಾವಾಹಿಗಳಲ್ಲಿ ಅತ್ಯಂತ ಆಪ್ತವಾದ, ಎಲ್ಲೂ ಅತಿರೇಕವೆನಿಸದೆ ವಾಸ್ತವಿಕ ನೆಲೆಗಟ್ಟಿನಲ್ಲಿ ಸುಂದರವಾಗಿ ನಿರೂಪಿತವಾದ, ಸೀತಾಲಕ್ಷ್ಮಿ ಶಿವರಾಮು ದಂಪತಿಗಳು ಹಾಗೂ ಇತರೆಲ್ಲಾ ಪಾತ್ರಗಳು ನಮ್ಮ ಸುತ್ತಲಿನಲ್ಲೇ ಜೀವಿಸುತ್ತಿರುವಂತೆ ಭಾಸವಾಗುವುದು ವಸುಮತಿ ಉಡುಪರ ಪ್ರೌಢಿಮೆಯನ್ನು ಮೆರೆದಿದೆ. ಇಂತಹ ಧಾರಾವಾಹಿಗಾಗಿ hats off ಟು ಸುಧಾ.

—ಶಂಕರ್ ಎಂ. ಬೆಂಗಳೂರು

ಧಾರಾವಾಹಿ ಮೂರು ತಲೆಮಾರಿನ ಕಾಲಕ್ಕನುಗುಣವಾಗಿ ಆಗುವ ಬದಲಾವಣೆಯನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಲೇಖಕಿಯ ಶೈಲಿ ಸರಳವಾಗಿದ್ದು, ನಿರರ್ಗಳವಾಗಿ ಓದಿಸಿಕೊಂಡು ಹೋಯಿತು. ಕಥೆ ಸುಖಾಂತ್ಯ ಕಂಡಿದ್ದು ಖುಷಿಕೊಟ್ಟಿತು.

—ಬಿ.ಎಸ್. ಹೇಮಾಜಿರಾವ್, ತುಮಕೂರು, ವಿ. ಮಾಧವ ಶ್ಯಾನುಭಾಗ, ಕುಂದಾಪುರ

## ಕಿಂದರಿಜೋಗಿಯಂತೆ...

ಕಾದಂಬರಿಗಾರ್ತಿ ಸಲೀಸಾಗಿ ಕಥೆ ಹೇಳುತ್ತಾ ಮುನ್ನಡೆದರು. ಓದುಗರಾದ ನಾವು ಕಿಂದರಿ ಜೋಗಿಯ ಹಿಂದೆ ಹೊರಟ ಮಕ್ಕಳಂತೆ ಪ್ರತೀವಾರ ಅವರ ಹಿಂದೆಯೇ ನಡೆದೆವು. ಕಾದಂಬರಿಯ ಕಡೆಯ ವಾಕ್ಯ ಅರ್ಥಗರ್ಭಿತ. ಕಲಾವಿದ ಮೋನಪ್ಪ ಅವರ ಕುಂಚ ನಿರ್ಜೀವ ವಸ್ತುಗಳಿಗೆ ಪ್ರಾಣ ತುಂಬಿದೆ.

—ಕೆ.ಎಂ. ಮದ್ದರಾಯ, ಬೆಂಗಳೂರು, ಕೆ.ಎನ್. ಪ್ರಭಾಕರ ಗುಪ್ತ, ಹಾಸನ

## ಒಳ್ಳೆಯ ಉಡುಗೊರೆ

ಬಹಳ ದಿನಗಳ ಬಳಿಕ 'ಸುಧಾ' ಓದುಗರಿಗೆ ಉಡುಗೊರೆ ನೀಡಿದೆ. ಈ ಧಾರಾವಾಹಿಯಲ್ಲಿ ಪ್ರೀತಿ, ದ್ವೇಷ, ಸ್ನೇಹ, ಸ್ವಾರ್ಥ, ಒಳ್ಳೆಯತನ ಎಲ್ಲವೂ ಮಿಳಿತವಾಗಿದೆ. ಇಂಥದ್ದೇ ಧಾರಾವಾಹಿ ಮುಂದೆಯೂ ಪ್ರಕಟಿಸಿ.

—ವೀಣಾ ರಮೇಶ್, ಬೆಂಗಳೂರು, ಜಿ.ವಿ. ಪಾಟೀಲ, ಗದಗ

ಕಾದಂಬರಿ ಮನಸ್ಸನ್ನು ಹಿಡಿದಿಟ್ಟಿತು. ಹಿಂದೆ ಬರುತ್ತಿದ್ದ ನೀಳಾದೇವಿ, ಅಶ್ವಿನಿ, ಪ್ರೇಮಾಭಟ್ ಇವರ ಕಥೆಗಳಂತೆ ಬಿಡದೆ ಓದಿಸಿತು.

—ವೈದೇಹಿ ಮಂಡ್ಯ